ಓ.ಎಸ್.372/2012 Pw-1

<u>ದಿನಾಂಕ 24.09.2021 ರಂದು ಸಾಕ್ಷಿಯನ್ನು ಮಧ್ಯಂತರ ಅರ್ಜಿಯ ಮೇಲೆ ಮಾಡಲಾದ ಆದೇಶದ ಅನ್ವಯ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟಿ ಸವಾಲುಃ ಶ್ರೀ.ಎಸ್.ಎಸ್. 7 ನೇ ಪ್ರತಿವಾದಿ ಪರ ವಕೀಲರಿಂದ</u>

ದಾವಾ ಸ್ವತ್ತು ಹಿಂದೆ ಒಣ ಭೂಮಿ ಎಂದರೆ ನಿಜ. ಸದರಿ ಭೂಮಿಯನ್ನು ಅಭಿವೃದ್ಧಿ ಮಾಡುವ ಸಲುವಾಗಿ ನಾನು ನನ್ನ ಸಹೋದರರು ಹಾಗೂ ನನ್ನ ತಾಯಿ ಎರಡನೇ ಪ್ರತಿವಾದಿಯ ಹೆಸರಿಗೆ ದಾವಾ ಸ್ವತ್ತಿನ ಖಾತಾ ಬದಲಾವಣೆ ಮಾಡಿದ್ದೇವು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಈಗ ತೋಟ ಆಗಿದೆ ಎಂದರೆ ನಿಜ. ಎರಡನೇ ಪ್ರತಿವಾದಿ ದಾವಾ ಸ್ವತ್ತಿನ ಸುತ್ತ ಸಾಗುವಾನಿ ಮರಗಳನ್ನು ನೆಟ್ಟು ಭೂ ಅಭಿವೃದ್ಧಿ ಪಡಿಸಿದ್ದಾರೆ ಎಂದರೆ ಸರಿ. ಎರಡನೇ ಪ್ರತಿವಾದಿ ದಾವಾ ಸ್ವತ್ತನ್ನು ಆಧಾರ ಮಾಡಿ 7 ನೇ ಪ್ರತಿವಾದಿ ಬ್ಯಾಂಕಿನಲ್ಲಿ ಬೋರ್ ಕೊರೆಸಲು ಹಾಗೂ ಭೂ ಅಭಿವೃದ್ಧಿ ಪಡಿಸಲು ಸಾಲ ಪಡೆದಿದ್ದರು ಎಂದರೆ ಸರಿ. 2 ನೇ ಪ್ರತಿವಾದಿ ರೂ.3,00,000/- ಸಾಲ 7 ನೇ ಪ್ರತಿವಾದಿ ಬ್ಯಾಂಕ್ ನಿಂದ ಸಾಲ ಪಡೆದಿದ್ದರು ಎಂದರೆ ಸಾಕ್ಷಿಯು ಸಾಲ ಪಡೆದಿದ್ದು ಗೊತ್ತು ಆದರೆ ಎಷ್ಟು ಲಕ್ಷ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ನಮ್ಮ ಕುಟುಂಬದ ಪರವಾಗಿ ಸಾಲ ಪಡೆದಿರುವ ಕಾರಣ ನಾವೆಲ್ಲರೂ ಸಹ ಸಾಲ ಮರುಪಾವತಿ ಮಾಡಲು ಭಾದ್ಯರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ಮೈಸೂರಿನಲ್ಲಿ ಮನೆ ಕಟ್ಟಿಕೊಂಡು ವಾಸ ಇದ್ದು ಅವರಿಗೆ ಸೈಟು ಮತ್ತು ಮನೆ ಇದೆ ಎಂದರೆ ಸರಿ. ನನ್ನ ಸಹೋದರ ಚಿಕ್ಕಣ್ಣ ನವರಿಗೂ ಸಹ ಮೈಸೂರಿನಲ್ಲಿ ಮನೆ ಮತ್ತು ಸೈಟು ಇದೆ ಎಂದರೆ ನಿಜ. ನನ್ನ ತಂದೆ ತಾಯಿಯ ಸ್ವಂತ ಸ್ಥಳವಾದ ಬೊಂತಗಳ್ಳಿಯಲ್ಲಿ ಮನೆ ಮತ್ತು ಸೈಟು ಇದೆ ಎಂದರೆ ನಿಜ. ಸದರಿ ಮೇಲೆ ಹೇಳಿದ ಮನೆ ಹಾಗೂ ಸೈಟುಗಳನ್ನು ಹೊರತು ಪಡಿಸಿ ಕೇವಲ ಬ್ಯಾಂಕಿನಲ್ಲಿ ಆಧಾರ ಮಾಡಿದ ಜಮೀನಿನ ಸಂಬಂಧ ಮಾತ್ರ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ಬ್ಯಾಂಕಿಗೆ ತೊಂದರೆ ಮಾಡುವ ಉದ್ದೇಶದಿಂದ ಕೇವಲ ಜಮೀನಿನ ಸಂಬಂಧ ಈ ದಾವೆಯನ್ನು ಸಲ್ಲಿಸಿ ಭಾಗ ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ

ಪ್ರಧಾನ  ಸಿಜೆ ಶ್ರೀರಂಗಪಟ್ಟಣ